ದೇವಸ್ಥಾನಗಳ ಅಭಿವೃದ್ಧಿ

166(311); ಶ್ರೀ ಅಂಗಾರ ಎಸ್. (ಸುಳ್ಯ)

ಅ) ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ಸುಳ್ಯ ತಾಲ್ಲೂಕಿನ ಬಳ್ಪ ಗ್ರಾಮದ ತ್ರಶೂಲಿ ದೇವಸ್ಥಾನಕ್ಕೆ ಯಾವ ಯಾವ ವರ್ಷಗಳಲ್ಲಿ ಜೀರ್ಣೋದ್ಧಾರ ಕಾರ್ಯಕ್ಕೆ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; (ವರ್ಷವಾರು ವಿವರ ನೀಡುವುದು);

ಆ) ಈ ಜೀರ್ಣೋದ್ಧಾರ ಕೆಲಸವನ್ನು ನಿರ್ವಹಿಸಲು ಯಾರಿಗೆ ವಹಿಸಲಾಗಿದೆ? (ಪೂರ್ತಿ ವಿವರ ನೀಡುವುದು)

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಸುಳ್ಯ ತಾಲ್ಲೂಕಿನ ಬಳ್ಪ ಗ್ರಾಮದ ತ್ರಿಶೂಲಿನಿ ದೇವಾಲಯದಲ್ಲಿ ಗರ್ಭಗುಡಿಯ ಸುತ್ತಲಿನ ಚಂದ್ರಶಾಲೆಯ ಮತ್ತು ಮುಂಭಾಗದ ಮುಖಮಂಟಪದ ಸಂರಕ್ಷಣೆಯನ್ನು ರಾಜ್ಯ ಯೋಜನೆಯಡಿ ರೂ. 42.49,494/– ಗಳಲ್ಲಿ ಕೈಗೊಂಡಿದ್ದು ಈ ಕಾಮಗಾರಿಯು 2006–07ನೇ ಸಾಲಿನಲ್ಲಿ ಪ್ರಾರಂಭಗೊಂಡು 2008–09ನೆ ಸಾಲಿನಲ್ಲಿ ಪೂರ್ಣಗೊಂಡಿದೆ.

ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾದ 13ನೇ ಹಣಕಾಸು ಯೋಜನೆಯಡಿ 2014–15ನೇ ಸಾಲಿನಲ್ಲಿ ರೂ. 1,47,87,709 ಲಕ್ಷಗಳಲ್ಲಿ ದೇವಾಲಯದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

1) ವಸಂತ ಮಂಟಪವನ್ನು ಬಿಚ್ಚಿ ಸಂಪೂರ್ಣ ಸಂರಕ್ಷಣೆಗೆ ಮಾಡುವುದು.

2) ಮುಖಮಂಟಪ ಮೇಲೆ ಜಂಬ್ಬಿಟ್ಟಿಗೆಯ ಅಧಿಷ್ಟಾನ ಮತ್ತು ಕಾಲಾವಧಿ ಗೋಡೆಯನ್ನು ಹಳೆಯ ಮಾದರಿಯಲ್ಲೇ ಕಲಾತ್ಮಕವಾಗಿ ಕೆತ್ತನೆ ಮಾಡಿ ಅಳವಡಿಸುವುದು.

3) ಮುಖ–ಮಂಟಪದ ಮೇಲೆ ಜಂಬ್ಬಿಟ್ಟಿಗೆಯ ಶಿಖರವನ್ನು ನಿರ್ಮಿಸುವುದು.

4) ಸ್ಥಳದಲ್ಲೆ ಇರತಕ್ಕಂತ ಹಳೆಯ ಕಲ್ಲುಗಳನ್ನು ನಯಗೊಳಿಸಿ ನೆಲಹಾಸು ಮತ್ತು ಪ್ರದಕ್ಷಿಣ ಪಥ ನಿರ್ಮಾಣ.

5) ದೇವಾಲಯದ ಮುಂಭಾಗದಲ್ಲಿರುವ ಸಣ್ಣ ಮೋರಿಯನ್ನು 1ಮೀ ವ್ಯಾಸದ ಸಿಮೆಂಟ್ ಪೈಪನ್ನು ಅಳವಡಿಸಿ ನಿರ್ಮಿಸುವುದು.

6) ಗರ್ಭಗುಡಿ ಸುತ್ತ ತೊಲೆ ಹಾಗೂ ಇಳಿಜಾರು ಮೇಲ್ಚಾವಣಿಯ ಮಧ್ಯದಲ್ಲಿನ ಮಣ್ಣಿನ ಗೋಡೆಯನ್ನು ತೆಗೆದು 30 ಸೆಂ.ಮೀ ದಪ್ಪದ ಕಲ್ಲನ್ನು ನಯಗೊಳಿಸಿ ಅಳವಡಿಸುವುದು.

7) ಮುಖಮಂಟಪಕ್ಕೆ ಹೊಂದಿಕೊಂಡಿರುವ ಚಂದ್ರಶಾಲೆಯ ಪುನರ್‌ನಿರ್ಮಾಣ.

8) ದೇವಾಲಯ ಮುಂಭಾಗದ ಪುಷ್ಕರಣಿಯ ಸಂರಕ್ಷಣೆ.

9) ದೇವಾಲಯಕ್ಕೆ ರಕ್ಷಣಾ ಗೋಡೆಯ ಸಂರಕ್ಷಣಾ ಕೆಲಸ.

ಆ) ಸದರಿ ಕಾಮಗಾರಿಯನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಹಾಗೂ ಪ್ರಾಚ್ಯವಸ್ತು ಇಲಾಖೆ/ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಲ್ಲಿ ಕಾಮಗಾರಿಯನ್ನು ನಿರ್ವಹಿಸಿರುವಂತಹ ಅರ್ಹ ಗುತ್ತಿಗೆದಾರರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರನ್ವಯ ಕರೆದಿದ್ದ ಟೆಂಡರ್‌ನಡಿ ಭಾಗವಹಿಸಿ ಆಯ್ಕೆಗೊಂಡ ಶ್ರೀ ವಿಜಯಕುಮಾರ್, ಪ್ರಥಮ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ವಹಿಸಲಾಗಿದೆ.